## ಈಜು ಸ್ಪರ್ಧೆ : ಡಾ| ಸ್ಮಿತಾರಿಗೆ ಬೆಳ್ಳಿ



ಡಾ| ಸ್ಮಿತಾ ಎನ್.ರಾವ್ (ಮಂಗಳೂರು) ಇವರು ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ 'ಮಾಸ್ಟರ್ಸ್ ಸ್ವಿಮಿಂಗ್ ಚಾಂಪಿಯನ್ ಶಿಪ್'ನಲ್ಲಿ ಬೆಳ್ಳಿ ಪದಕವನ್ನು ಗೆದ್ದಿರುತ್ತಾರೆ. ಮುಂಬಯಿನಲ್ಲಿ ನಡೆದ ರಾಷ್ಟ್ರಮಟ್ಟದ 'ಮಾಸ್ಟರ್ಸ್ ಸ್ವಿಮಿಂಗ್ ಚಾಂಪಿಯನ್‌ಶಿಪ್'ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಇವರು ಕಂಚಿನ ಪದಕವನ್ನು ಪಡೆದಿರುತ್ತಾರೆ. ಕಳೆದ ವರ್ಷ ಟ್ರಿವೆಂಡ್ರಮ್‌ನಲ್ಲಿ ರಾಷ್ಟ್ರಮಟ್ಟದ 'ಮಾಸ್ಟರ್ಸ್ ಸ್ವಿಮಿಂಗ್ ಚಾಂಪಿಯನ್‌ಶಿಪ್'ನಲ್ಲೂ ಪದಕ ಗಳಿಸಿರುತಾರೆ. ಇವರು 2 ವರ್ಷಗಳಿಂದ ಶ್ರೀ ರವೀಶ್ ವಿ. ಅವರಿಂದ ತರಬೇತು ಪಡೆದಿದ್ದಾರೆ. ಇವರು ಮಂಗಳೂರಿನ ಡಾ| ನಂದಕಿಶೋರ್ ಡಿ. ಇವರ ಧರ್ಮಪತ್ನಿ. ಡಾ| ಸ್ಮಿತಾರವರ ಅದ್ವಿತೀಯ ಸಾಧನೆಗಾಗಿ ಶ್ರೀಶಾರದಾ ಬಳಗದ ಅಭಿನಂದನೆಗಳು

## ಸಾಧನಾ ಪ್ರಶಸ್ತಿ - ಡಾ| ಎಸ್. ಹರೀಶ ಜೋಶಿಯವರಿಗೆ



ಸಾಧನಾ ರಾಷ್ಟ್ರೀಯ ಸಾಂಸ್ಕೃತಿಕ ಪ್ರತಿಷ್ಠಾನ ಮಂಗಳೂರು ಇವರು 2007ನೇ ಸಾಲಿನ ಸಾಧನಾ ಪ್ರಶಸ್ತಿಗೆ ಡಾ| ಎಸ್. ಹರೀಶ ಜೋಶಿಯವರನ್ನು (ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರು, ಸಂತಎಲೋಶಿಯಸ್ ಕಾಲೇಜು, ಮಂಗಳೂರು) ಜೀವ ವಿಜ್ಞಾನ ಕ್ಷೇತ್ರದ ಪರಿಸರ ಸಂಬಂಧಿ ವಿಶಿಷ್ಟ ಸೇವೆಗಾಗಿ ಮತ್ತು 13 ಸಂಶೋಧನಾ ಪ್ರಬಂಧಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಜ್ಞಾನ ಪತ್ರಿಕೆಗಳಲ್ಲಿ ಪ್ರಕಟಗೊಂಡ ಬಗ್ಗೆ ಮೆಚ್ಚುಗೆ ಸೂಸಿ ದಶಂಬರ 21, 2007ರಂದು ಪುರಭವನದಲ್ಲಿ ಫಲ, ಫಲಕ, ಸನ್ಮಾನಪತ್ರದೊಂದಿಗೆ ವಿಜೃಂಭಣೆಯಿಂದ ಸನ್ಮಾನಿಸಿದ್ದಾರೆ. ಇವರ ಈ ವಿಶಿಷ್ಠ ಸಾಧನೆಗಾಗಿ ಶಾರದಾ ಬಳಗದ ಅಭಿನಂದನೆಗಳು.

## ಮಾಸ್ಟರ್ ರವಿತೇಜಸ್ವಿ - ಭರತನಾಟ್ಯ ರಂಗಪ್ರವೇಶ

ಬೆಂಗಳೂರಿನ ಯಶವಂತಪುರದಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಎಮ್.ಆರ್.ವಿ.ರಾಜಾ ಹಾಗೂ ಶ್ರೀಮತಿ ಅನ್ನಪೂರ್ಣಾ ದಂಪತಿಗಳ ಪುತ್ರ ಮಾ| ರವಿ ತೇಜಸ್ವೀಯವರ ಭರತನಾಟ್ಯ ರಂಗಪ್ರವೇಶವು ತಾ.10-02-2008ರಂದು ಸಂಜೆ 6-00ಕ್ಕೆ ಬೆಂಗಳೂರಿನ ಎ.ಡಿ.ಎ. ರಂಗಮಂದಿರದಲ್ಲಿ ನೆರವೇರಿತು.

ಮಾಜಿ ಮಂತ್ರಿಗಳಾದ ಕೆ. ಎಸ್. ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಹೆಸರಾಂತ ಸಾಹಿತಿಗಳಾದ ಶ್ರೀ ಶಂಕರನಾರಾಯಣ ಉಪಾಧ್ಯಾಯ ಹಾಗೂ ಬೆಂಗಳೂರಿನ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಎಮ್. ಸರಳಾರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಬೆಂಗಳೂರಿನ ನೃತ್ಯ ವಿದ್ಯಾನಿಲಯದ ಗುರುಗಳಾದ ನೃತ್ಯ ವಿದುಷಿ ಶ್ರೀಮತಿ ಸಂಧ್ಯಾ ಕೇಶವರಾವ್‌ರವರ ಶಿಷ್ಯರಾದ ಮಾ| ರವಿ ತೇಜಸ್ವಿಯವರು ಭರತನಾಟ್ಯದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವಂತಾಗಲಿ ಎಂದು ಶ್ರೀಶಾರದಾ ಹಾರೈಸುತ್ತದೆ.

## ಮನೋಹರ್ ಪ್ರಸಾದ್‌ರಿಗೆ ಮಾಧ್ಯಮ ಪ್ರಶಸ್ತಿ



ಕರ್ನಾಟಕ ಮಾಧ್ಯಮ ಅಕಾಡಮಿಯ ಬೆಳ್ಳಿಹಬ್ಬದ ವರ್ಷದಲ್ಲಿ 'ಉದಯವಾಣಿ' ಮಂಗಳೂರು ಕಛೇರಿಯ ಚೀಫ್ ಆಫ್ ಬ್ಯೂರೋ ಮನೋಹರಪ್ರಸಾದ್‌ರಿಗೆ ಅಕಾಡಮಿ ಪ್ರಶಸಿ ಲಭಿಸಿರುತದೆ. ಇವರಿಗೆ ಶ್ರೀಶಾರದಾ ಬಳಗೆದ ಅಭಿನಂದೆನೆಗಳು.

## ನಂದಳಿಕೆ ಬಾಲಚಂದ್ರರಾವ್‌ರಿಗೆ ಕಾಂತಾವರ ಸನ್ಮಾನ



ಕರ್ನಾಟಕ ಬ್ಯಾಂಕಿನಲ್ಲಿ ಅಧಿಕಾರಿಯಾಗಿರುವ ನಂದಳಿಕೆ ಬಾಲಚಂದ್ರರಾಯರಿಗೆ ಮುದ್ದಣ್ಣ ಕವಿಯ ಬಗೆಗಿನ ಭಕ್ತಿಯು ಸಂಘಟಕರನ್ನಾಗಿ ದುಡಿಯಲು ಪ್ರೇರೆಪಿಸಿದೆ. ಕಾಂತಾವರ ಕನ್ನಡ ಸಂಘ ಇವರನ್ನು ಸನ್ಮಾನಿಸಿದೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಶಿಕ್ಷಣ ಮತ್ತು ತರಬೇತಿ ವೇದಿಕೆ
### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು , ಉಡುಪಿ
### ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿ ಶಿಬಿರ

**ಸಮಯ : 9.30 ರಿಂದ 3.00ರ ವರೆಗೆ ದಿನಾಂಕ 02-03-2008 ಆದಿತ್ಯವಾರ**
**ಸ್ಥಳ : ಜ್ಞಾನಮಂದಿರ (ರತ್ನಸ್ಮೃತಿ)**

ಗಣಿತ ಹಾಗೂ ವಿಜ್ಞಾನ ವಿಷಯಗಳಿಗೆ ತರಬೇತಿ ನೀಡಲಾಗುವುದು. ಶಿಬಿರದಲ್ಲಿ ಭಾಗವಹಿಸುವವರು ಗಣಿತ, ವಿಜ್ಞಾನ ಪಠ್ಯಪುಸ್ತಕ ಹಾಗೂ ಈ ಹಿಂದಿನ ಪೂರ್ವ ತಯಾರಿ ಪರೀಕ್ಷೆ, ಪಬ್ಲಿಕ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಯೊಂದಿಗೆ ಭಾಗವಹಿಸುವುದು. ಶಿಬಿರಾರ್ಥಿಗಳಿಗೆ ಉಪಾಹಾರ ಹಾಗೂ ಮಧ್ಯಾಹ್ನದ ಊಟ ನೀಡಲಾಗುವುದು. ಆಸಕ್ತರು ಶ್ರೀ ಪಿ. ಪ್ರಭಾಕರ ಭಂಡಿ ಇವರಿಗೆ (ಫೋನ್ : 94492 54846) ಮುಂಚಿತವಾಗಿ ತಿಳಿಸುವುದು.

**- ಅಧ್ಯಕ್ಷರು, ಸದಸ್ಯರು, ಶಿಕ್ಷಣ ತರಬೇತಿ ವೇದಿಕೆ.**

### ॥ ಮಹಾಲಿಂಗೇಶ್ವರ ಪ್ರಸನ್ನಾಃ ॥ ॥ ಕುಲದೇವತಾ ಪ್ರಸನ್ನಾಃ ॥

**ಬಂಧು ಬಾಂಧವವರೇ,** **ಪಡುಬಿದ್ರಿ**

**ಉಡುಪಿ ಜಿಲ್ಲಾ ಉಡುಪಿ ತಾಲೂಕಿನ ಪಡುಬಿದ್ರಿ ಕಾಶ್ಯಪ ಗೋತ್ರಜ ಸಂತಾನದ ಸ್ಥಾನಿಕ ಬ್ರಾಹ್ಮಣ ಕುಟುಂಬದ ಮೂಲ ನಾಗಬ್ರಹ್ಮ ಸ್ಥಾನದ ಕ್ಷೇತ್ರಪಾಲ, ರಕ್ತೇಶ್ವರಿ ನಂದಿಗೋಣ ನಾಗಬ್ರಹ್ಮ ಗುಡಿಗಳು ಪಡುಬಿದ್ರಿ ಮಹಾಗಣಪತಿ, ಮಹಾಲಿಂಗೇಶ್ವರದ ಹಿಂದುಗಡೆ ಇರುವ ಪೂರ್ವಿಕರ ಮನೆಯ ಜಾಗದಲ್ಲಿದ್ದು ವರ್ಷಕ್ಕೊಮ್ಮೆ ವೃಷಭ ಮಾಸದಲ್ಲಿ ಪತ್ತನಾಜೆಯ ಮೊದಲು ವಾಡಿಕೆಯಂತೆ ದೇವತಾರಾಧನೆ ನಾಗತಂಬಿಲ ಸೇವೆಗಳೂ, ನಾಗರ ಪಂಚಮಿಯಂದು ನಾಗಗಳಿಗೆ ಹಾಲಿಟ್ಟು ಸೇವೆಯನ್ನೂ ನಡೆಸಿಕೊಂಡು ಬರಲಾಗುತ್ತಿದೆ. ಮತ್ತು ಇದೀಗ ಆರೂಢ ಪ್ರಶ್ನೆಯಲ್ಲಿ ಕಂಡುಬಂದಂತೆ ಪ್ರಾಯಶ್ಚಿತ್ತ ಅಘೋರ ಹೋಮಗಳನ್ನು ಮಾಡಿಸಲಾಗಿದೆ. ಹಾಗೂ ಕ್ಷೇತ್ರಪಾಲ, ರಕ್ತೇಶ್ವರಿ ನಾಗಬ್ರಹ್ಮ ಗುಡಿಗಳನ್ನು ನೂತನವಾಗಿ ಪುನರ್ರಚಿಸುವರೇ ಜೀರ್ಣೋದ್ಧಾರ ಕಾರ್ಯಗಳ ಯೋಜನೆಯನ್ನು ರೂಪಿಸಲಾಗಿದೆ. ಆ ಪ್ರಕಾರ ಆವರ್ತ ಸಹಿತ ನಾಗಬನದ ಕೆಲಸಗಳು ಪ್ರಾರಂಭಗೊಂಡು ಭೂಮಿ ಪೂಜೆ ಶಿಲಾನ್ಯಾಸ ಕಾರ್ಯಕ್ರಮವು ತಾ.30-12-2007ನೇ ಆದಿತ್ಯವಾರದಂದು ಜರಗಿತು ಮತ್ತು 09-03-2008ನೇ ಆದಿತ್ಯವಾರ ನವೀಕೃತ ನಾಗಬನದ ಉದ್ಘಾಟನೆಯು ವಿವಿಧ ವೈಧಿಕ ವಿಧಿಗಳೊಂದಿಗೆ ಜರುಗಲಿದೆ. ಸದ್ರಿ ಕುಟುಂಬದ ಎಲ್ಲ ಸದಸ್ಯರು ಬಂಧು-ಬಾಂಧವರು ತನು-ಮನ-ಧನಗಳಿಂದ ಸಹಕರಿಸಿ ಭಾಗವಹಿಸಿ ಶ್ರೀ ದೇವರ ಕೃಪಾ ಕಟಾಕ್ಷಕ್ಕೊಳಪಡಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.**

**- ಪಡುಬಿದ್ರಿ ಪುಟ್ಟುರಾಯ ಕುಟುಂಬಸ್ಥರು.**

### ಉಪನ್ಯಾಸ ಕಾರ್ಯಕ್ರಮ-ವಿದ್ಯಾರ್ಥಿ ಜೀವನದಲ್ಲಿ ಕಾನೂನಿನ ಪಾತ್ರ

**ದಿನಾಂಕ : 02-03-2008 ಆದಿತ್ಯವಾರ ಸಮಯ ಅಪರಾಹ್ನ 3 ರಿಂದ 4-30ರ ವರೆಗೆ**
**ಸಂಪನ್ಮೂಲ ವ್ಯಕ್ತಿ : ಶ್ರೀ ಕೆ. ದೇಜಪ್ಪ M.A., D.H.R.M., L.L.B. Advocate Udupi**
**(ಹಿಂದಿನ ಮುಂಬೈ ಉಚ್ಚ ನ್ಯಾಯಾಲಯದ ವಕೀಲರು).**

ನಮ್ಮ ಸಮಾಜದ ಎಲ್ಲಾ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದು ಪ್ರೋತ್ಸಾಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ಪದಾಧಿಕಾರಿಗಳು, ಶಿಕ್ಷಣ ತರಬೇತಿ ವೇದಿಕೆ.**

*Krishna Rao*
Ph : 2552560
Mob. : 92422 02118

**KISHAN**
**Studio & Video**

**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
